# ಲೆನಿನ್ ಹೋರಾಟದ ಸಿದ್ಧಾಂತ

ಖಚಿಂಥಿಚಿಟಟಚಿ ಖಚಿಣಂಥಿಚಿಟಟಚಿ

ಕೆಲವು ಪವಿತ್ರವಾದ ದಿನಗಳನ್ನು ರಜಾದಿನಗಳೆಂದು ಘೋಷಿಸುವುದು ಬಹಳ ಹಿಂದಿನಿಂದ ಬಂದಿರುವ ಪದ್ಧತಿ. ಅಂತಹ ದಿನಗಳಲ್ಲಿ ಕೆಲಸ ಮಾಡುವ ಪರಿಪಾಠವನ್ನು ಆರಂಭಿಸಿದಾಗ ಅದಕ್ಕೆ 'ಸುಬೋತ್ನಿಕ್' ಎಂಬ ಹೆಸರನ್ನು ರಷ್ಯಾದಲ್ಲಿ ನೀಡಲಾಗಿತ್ತು. ಅದಕ್ಕೆ ಚಾಲನೆ ನೀಡಿದ್ದು ಲೆನಿನ್. ಅಂದಿನ ದುಡಿಮೆಗೆ ಕೂಲಿ ಇರುತ್ತಿರಲಿಲ್ಲ. ಕೇವಲ ಗೌರವ ಮತ್ತು ಸಂತೃಪ್ತಿಯ ಭಾವನೆ ಇರುತ್ತಿತ್ತು. ಅದನ್ನು ಕುರಿತು ಲೆನಿನ್ ಹೇಳಿದರು. "ಇದು ಜೀವನದ ದೃಷ್ಟಿ ಬದಲಾಗುತ್ತಿರುವುದರ ಕುರುಹು. ಬಂಡವಾಳ ಶಾಹಿ ಪ್ರಭುತ್ವವನ್ನು ಬದಲಾಯಿಸುವುದಕ್ಕಿಂತಲೂ ಕಷ್ಟವಾದ ಕೆಲಸವೆಂದರೆ ಈ ದೃಷ್ಟಿಯನ್ನು ಬದಲಾಯಿಸುವುದು ಅದಿಲ್ಲದೆ ಸಮಾಜವಾದವನ್ನು ಭದ್ರವಾಗಿ ಕಟ್ಟಲಾಗುವುದಿಲ್ಲ".

ಲೆನಿನ್ ಜಗತ್ತಿನ ಶೋಷಿತ ಜನಸಮುದಾಯಕ್ಕೆ ಹೋರಾಟದ ಮಾರ್ಗದರ್ಶಿಯಾಗಿದ್ದಾರೆ. 1902-03ನೇ ವರ್ಷಗಳಲ್ಲಿ ಅವರು ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ ವಾಸವಾಗಿದ್ದು. ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ಸಮಾಜವಾದ ಚಳುವಳಿಯ ಮೂಲ ಪುರುಷರಾದರೂ ಅದರ ಪ್ರಾಯೋಗಿಕ ನೇತಾರ ಲೆನಿನ್ ಆಗಿದ್ದಾರೆ. ಹುಟ್ಟು ಹೆಸರು ವ್ಲಾಡ್ಲಿಮಿರ್ ಇಲ್ಯಿಚ್ ಉಲ್ಯಾನೋವ್ ಎಂದು. ಈತ ಹುಟ್ಟಿದ್ದು 1870ರಲ್ಲಿ. ಇಂದಿನ ಸನ್ನಿವೇಶದಲ್ಲಿ ನಮ್ಮ ದೃಷ್ಟಿ ಹೆಚ್ಚು ಸಂಕುಚಿತವಾಗುತ್ತಿದೆಯೆ ಅಥವಾ ಹೆಚ್ಚು ಸ್ವಾರ್ಥ ಮೂಲವಾಗುತ್ತಿದೆಯೆ, ಎಂಬ ಪ್ರಶ್ನೆಗಳು ಮುಖ್ಯವಾದವುಗಳೆಂದು ತಿಳಿಸಿದವರು. ರಷ್ಯಾ ಕ್ರಾಂತಿಗೆ ಮುನ್ನ 1913ರಲ್ಲಿ ಲೆನಿನ್ ಬರೆದಂತೆ, "ನಮ್ಮ ಹಿಂದಿನ ಪೀಳಿಗೆಯವರಿಗಿಂತಲೂ ನಮಗೆ ಹೆಚ್ಚು ಕಷ್ಟಗಳಿವೆ. ಆದರೆ ಅವರಿಗಿಂತಲೂ ಹೆಚ್ಚು ಅದೃಷ್ಟವಂತರು ನಾವು. ನಾವು ಕಲಿಯುವುದನ್ನು ಪ್ರಾರಂಭಿಸಿದ್ದೇವೆ. ಮತ್ತು ಕ್ರಮೇಣ ಹೋರಾಡುವುದನ್ನೂ ಕಲಿಯುತ್ತಿದ್ದೇವೆ." ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕು. ನಾವು ಹೋರಾಡುವುದನ್ನು ಕಲಿತಿದ್ದೇವೆಯೇ ಮತ್ತು ಯಾವುದಕ್ಕಾಗಿ ನಾವು ಹೋರಾಡುತ್ತಿದ್ದೇವೇ? ಕೋಟಿಗಟ್ಟಲೆ ಬೆಲೆ ಬಾಳುವ ನಮ್ಮ ಉದ್ದಿಮೆಗಳನ್ನು ಕಸಕ್ಕಿಂತಲೂ ಕಡೆ ಎಂಬಂತೆ ಬೇಕಾಬಿಟ್ಟಿ ಖಾಸಗಿಯವರಿಗೆ ವಹಿಸಿಕೊಡುವ ದ್ರೋಹ ನಡೆಯುತ್ತಿರುವಾಗ ನಮ್ಮ ಹೋರಾಟ ಎಲ್ಲಿ ಯಾವಾಗ? ಅಮೆರಿಕಾದ ಅಧ್ಯಕ್ಷರನ್ನು 'ವಿಶ್ವದ ಮೊದಲ ಪ್ರಜೆ' ಎಂದು ಬಣ್ಣಿಸಿ ಮೋಹಗೊಳ್ಳುವ ಮಂತ್ರಿಗಳು ಕಲಿತಿರುವುದು ಏನನ್ನು? ವೋರೋನ್ಸ್ಕಿ ಹೇಳುವಂತೆ ಲೆನಿನ ಪ್ರಭುತ್ವವಿದ್ದುದು ಜನಗಳ ಮೇಲಲ್ಲ, ಅವರ ಹೃದಯಗಳ ಮೇಲೆ, ಒಂದು ಪ್ರಬಲವಾದ ಪಕ್ಷವನ್ನವರು ಕಟ್ಟಿದ್ದು ಆ ಬಲದಿಂದ. ಮಯಕೋವ್‌ಸ್ಕಿ ತನ್ನ ಲೆನಿನ್ ಗಾದೆಯಲ್ಲಿ ಹೇಳುವಂತೆ ಪಕ್ಷವೆಂದರೆ ಲಕ್ಷಗಟ್ಟಲೆ ಬೆರಳುಗಳು ಮುಷ್ಟಿಯಲ್ಲಿ ಬೆರೆತು ಒಂದಾಗಿ, ಪ್ರಬಲವಾದ ಶಕ್ತಿಯಾಗಿ ಮಾರ್ಪಾಡುವುದು. ದೌರ್ಜನ್ಯ. ದಬ್ಬಾಳಿಕೆಗಳನ್ನು ಹತ್ತಿಕ್ಕಲು ಬೇಕಾಗಿರುವುದು ಅಂತಹ ಸಂಘಟನೆಯಾಗಿದೆ.

"ಆಳುವ ಪಕ್ಷದ ಸದಸ್ಯರಾಗಿ ಕೆಲವು ಸವಲತ್ತುಗಳನ್ನು ಪಡೆದೆಕೊಳ್ಳಲೆಂದು ನಾವು ಹೊಸ ಸದಸ್ಯರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ, ನೈಜವಾದ ದುಡಿಮೆಗೆ ಒಂದು ಮಾದರಿಯನ್ನು ಕಲ್ಪಿಸಬೇಕಾದವರು ಪಕ್ಷದ ಸದಸ್ಯರು". ಎಂದು ಲೆನಿನ್ 'ಸುಬೋತ್ನಿಕ್'ಗಳ ಕಾಲದಲ್ಲಿ ಹೇಳುತ್ತಿದ್ದರು. 1922ರಲ್ಲಿ ನಾಲ್ಕನೆಯ ಕೊಮಿಂಟರ್ನ್ ಕಾಂಗ್ರೆಸ್‌ನಲ್ಲಿ ಮಾತನಾಡುತ್ತಾ ಲೆನಿನ್ ತಮ್ಮ ನಾಡಿನ ಅನೇಕ ಕಷ್ಟದ ಪರಿಸ್ಥಿತಿಗಳನ್ನು ವಿವರಿಸಿದರು. ಮತ್ತು ತಮ್ಮ ಪಕ್ಷದ ನಿಲುವಿನಲ್ಲಿದ್ದ ಕೆಲವು ತಪ್ಪುಗಳನ್ನು ಹೆಸರಿಸಿ ಅವುಗಳಿಂದ ಕಲಿಯಬೇಕಾದ ಪಾಠಗಳತ್ತ ಗಮನಹರಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳಿವೆ. ನನ್ನ ಈ ಮಾತುಗಳನ್ನು ಕೇಳಿ ನಮ್ಮ ಶತ್ರುಗಳು ಹರ್ಷಿಸಬಹುದು. ನೋಡಿ ಬೋಲ್ಶೆವಿಕರೂ ಹಲವಾರು ತಪ್ಪುಗಳನ್ನ ಮಾಡಿದ್ದಾರೆ. ಸ್ವತಃ ಲೆನಿನ್ ಅವನ್ನು ಒಪ್ಪಿಕೊಂಡಿದ್ದಾನೆ. ಇದೆಲ್ಲಾ ನಿಜ, ಆದರೆ ಅಷ್ಟೇ ನಿಜವಾದ ಸಂಗತಿಯೆಂದರೆ ಹೀಗೆ ಆಡಿಕೊಳ್ಳುವವರು ಮಾಡಿರುವ ಅಸಂಖ್ಯಾತ ತಪ್ಪುಗಳನ್ನು ಬೋಲ್ಶೆವಿಕನೊಬ್ಬ ಮೂರ್ಖತನದಿಂದ 'ಎರಡೆರಡಲ ಐದು' ಎನ್ನಬಹುದು. ಆದರೆ ಅವನ ವಿರೋಧಿಯಾದ ಬಂಡವಾಳ ಹೂಡುವವನು ಮೂರ್ಖತನದ ತಪ್ಪು ಮಾಡಿದಾಗ ಕೊಬ್ಬಿದ ಲಾಭವನ್ನು ಪಡೆದುಕೊಳ್ಳುತ್ತಾನೆ.

ಈ ತತ್ವದ ಆಧಾರದ ಮೇಲಿನ ಆತ್ಮಾವಲೋಕನ ಇಂದು ನಮಗೆ ಅಗತ್ಯವಾಗಿದೆ. ಲೆನಿನ್ ಬಳಸಿದ ವಿಶ್ಲೇಷಣಾ ವಿಧಾನವನ್ನು ನಮ್ಮ ಇಂದಿನ ಸನ್ನಿವೇಶದಲ್ಲಿ ಮನನ ಮಾಡುವುದು ಯೋಗ್ಯವಾಗಿದೆ ಮತ್ತು ಅಗತ್ಯವಾಗಿದೆ. 1903ರ

ಮಾರ್ಚ್‌ನಲ್ಲಿ ಲೆನಿನ್ ಬರೆದ ಒಂದು ಕಿರುಹೊತ್ತಿಗೆ 'ಹಳ್ಳಿಯ ಬಡವರಿಗೆ' ಎಂಬುದು. ಅಂದಿನ ದಿನಗಳಲ್ಲಿ ಪ್ರಚಲಿತವಾಗಿದ್ದ ಒಂದು ವಾದ ಹೇಗಿತ್ತು ಎಂದರೆ, ಹಳ್ಳಿಯ ರೈತ ಎಂದಿದ್ದರೂ ಜಮೀನಿಗೆ ಜೋತು ಬಿದ್ದವನು ಅವನಿಗೆ ಆಸ್ತಿಯ ವ್ಯಾಮೋಹ ನಿರಂತರವಾದದ್ದು. ಕಾರ್ಖಾನೆಯ ದುಡಿಮೆಗಾರನಿಗೆ ಅಂತಹ ಆಶಯ ಇಲ್ಲವಾದ್ದರಿಂದ ಅವನು ಕ್ರಾಂತಿಕಾರಕನಾಗಬಲ್ಲನೆಂದು ಹೀಗಿರುವಾಗ ಯಾವ ಹೋರಾಟದಲ್ಲೇ ಆಗಲಿ ರೈತ ಕಾರ್ಮಿಕ ಜಂಟಿ ಹೋರಾಟದ ಸಂಘಟನೆಯು ಸರ್ವಥಾ ಸಾಧ್ಯವಿಲ್ಲವಾಗಿದೆ.

ಜೊತೆಗೆ ಇದು ಒಂದು ರೀತಿಯ ತರ್ಕ. ದೊಡ್ಡ ಬಂಡವಾಳ ಹೂಡುವ ದೊಡ್ಡ ಉದ್ಯಮ ಹಾಗೂ ದೊಡ್ಡ ಭೂಮಾಲೀಕ, ಇವರೆಲ್ಲ ಶೋಷಕರಾಗಿ ಒಟ್ಟಾಗಿದ್ದಾರೆ. ಅವರು ಶೋಷಿಸುವ ಗುಂಪುಗಳು ಬೇರೆ ಬೇರೆ ಆದರೆ ಶೋಷಣೆಗೆ ಪ್ರತಿರೋಧ ಒಡ್ಡಿದಾಗ ಅದನ್ನು ಅವರೆಲ್ಲಾ ಒಟ್ಟಾರೆ ಕಲೆತು ರಾಜ್ಯದ ಪ್ರಭುತ್ವ ಶಕ್ತಿಯನ್ನು ಬಳಸಿಕೊಂಡು ಹಿಮ್ಮೆಟ್ಟಿಸುತ್ತಾರೆ. ಅವರೆಲ್ಲರ ಆಸ್ತಿಯ ಪ್ರಮಾಣ ಬೇರೆ ಬೇರೆ ಇದ್ದರೂ ಒಂದಾಗಲೂ ಅಡ್ಡಿಯಿಲ್ಲ. ಹೀಗಿರುವಾಗ ಶೋಷಿತ ಸಮುದಾಯವು ಆಶಯಗಳ ಭಿನ್ನತೆಯನ್ನು ಮುಂದೊಡ್ಡಿ ಒಟ್ಟಾಗದಿರುವುದು ಶೋಷಕರಿಗೆ ಸಹಾಯ ಮಾಡಿದಂತಾಗುತ್ತದೆಯೆಂದು ಲೆನಿನ್ ಉತ್ತರಿಸುತ್ತಾರೆ.

ಸೈದ್ಧಾಂತಿಕ ಮಡಿವಂತಿಕೆಯ ತೋರಿಕೆ ಹೆಚ್ಚಾಗುತ್ತಿರುವ ಸಂದರ್ಭ ಇಂದು ನಮ್ಮಲ್ಲಿದೆ. ಸಾಮಾಜ್ಯಶಾಹಿಯನ್ನು ವಿರೋಧಿಸುವ ನಾಲ್ಕೈದು, ಸಂಘಟನೆಗಳಿದ್ದರೆ ಅವು ಪರಸ್ಪರ ಕಲೆತು ಒಟ್ಟಾಗಿ ಹೋರಾಟವನ್ನು ರೂಪಿಸ ಹೊರಡುವುದು ಅಪರೂಪ. ರಾಷ್ಟ್ರದ ಅಧ್ಯಕ್ಷರ ಪ್ರತಿಕೃತಿ ದಹನ ಮಾಡಬೇಕಾದರೂ ಅವರು ಬೇರೆ ಬೇರೆಯಾಗಿಯೇ ಮಾಡುವ ಸಂಭವವಿದೆ. ಇದರಿಂದ ಯಾರಿಗೆ ಅನುಕೂಲವಾಗುತ್ತಿದೆಯೆಂಬ ಕನಿಷ್ಠ ಪ್ರಜ್ಞೆಯೂ ನಮ್ಮನ್ನು ಕಲಕದಿರುವುದು ವಿಷಾದದ ವಿಷಯವಾಗಿದೆ. ಜೊತೆಗೆ ಹಳ್ಳಿ–ದಿಲ್ಲಿ, ಉದ್ದಿಮೆ–ಕೃಷಿ ಇವುಗಳನ್ನು ವಿರೋಧಿ ಅಂಗಗಳೆಂದು ಗುರುತಿಸುವ ರೂಢಿಯೂ ಬೆಳೆದಿದೆ. ಬ್ಯಾಂಕುಗಳಿಂದ ಸಾಲ ಪಡೆದು ಹಿಂದಿರುಗಿಸದೆ ಉಳಿದಿರುವ ಮೊಬಲಗು ಸಾವಿರಾರು ಕೋಟಿ ರೂಪಾಯಿಗಳು. ಅದನ್ನು ಹಿಂದಿರುಗಿಸದೆ ಇರುವವರಲ್ಲಿ ಉದ್ದಿಮೆಯ ಕಾರ್ಮಿಕರು, ಕೃಷಿ ಕಾರ್ಮಿಕರು ಎಷ್ಟು ಮಂದಿ ಹಾಗೂ ಅವರು ಹಿಂದಿರುಗಿಸದಿರುವ ಮೊತ್ತವೆಷ್ಟು? ಅದು ಅಗಾಧವಲ್ಲ. ಅಗಾಧ ಮೊತ್ತವನ್ನು ಉಳಿಸಿಕೊಂಡಿರುವವರೆಲ್ಲಿ ದೊಡ್ಡ ಉದ್ಯಮಪತಿಗಳಿದ್ದಾರೆ, ದೊಡ್ಡ ಭೂಮಾಲೀಕರೂ ಇದ್ದಾರೆ, ದಿಲ್ಲಿಯವರಿದ್ದಾರೆ ಹಳ್ಳಿಯವರೂ ಇದ್ದಾರೆಂದು. ಅಂದರೆ ವರ್ಗ ವಿಭಜಿತ ಸಮಾಜದಲ್ಲಿ ಹೋರಾಟದ ಸೂತ್ರಗಳು ವರ್ಗಗಳ ಐಕ್ಯದಿಂದ ಮೂಡಿಬರಬೇಕು. 1902ರಲ್ಲಿ ಲೆನಿನ್ ಒಂದು ಪತ್ರದಲ್ಲಿ ಪ್ಲೆಖನೋವ್‌ಗೆ ಬರೆದರು: "ನಮ್ಮ ಹಳ್ಳಿಗಳಲ್ಲಿ ವರ್ಗ ಹೋರಾಟದ ಸೂತ್ರಗಳನ್ನು ವ್ಯಾಪಕವಾಗಿ ತಿಳಿಯಪಡಿಸಲು ನಾನು ಕಾತುರನಾಗಿದ್ದೇನೆ. ಅಲ್ಲಿ ನಾಲ್ಕು ಗುಂಪುಗಳಿವೆ. ದೊಡ್ಡ ಭೂಮಾಲೀಕ, ಭೂಮಾಲೀಕ ಬಂಡವಳಿಗೆ, ಮಧ್ಯಮ ದರ್ಜೆಯ ರೈತ ಮತ್ತು ನಿರ್ಗತಿಕ ರೈತ ಕೂಲಿಯಾಳು ಇವರೆಲ್ಲ ಹಳ್ಳಿಯಲ್ಲಿದ್ದಾರೆಂಬ ಕಾರಣದಿಂದ ಒಂದು ವರ್ಗದವರೆನಿಸಿಕೊಳ್ಳುತ್ತಾರೆಯೇ?" ಎಂದು ಲೆನಿನ್ ತಮ್ಮ ಬರಹಗಳಲ್ಲಿ ಉಲ್ಲೇಖಿಸುತ್ತಾರೆ.

ನಮ್ಮ ವಿಶ್ಲೇಷಣೆಗಳಲ್ಲಿ ಇಂತಹ ವರ್ಗ ದೃಷ್ಟಿಕೋನದ ಬದಲು ಜಾತಿಗಳ ಮೂಲದಿಂದ ವಿಂಗಡಣೆ ಮಾಡುವ ಪದ್ಧತಿ ಹೆಚ್ಚಾಗುತ್ತಿದೆ. ಅದು ಭೂಮಾಲೀಕರ ಸ್ಥಾನವನ್ನು ಭದ್ರಗೊಳಿಸುವುದರ ಜೊತೆಗೆ ಜಡ ಸಾಮಾಜಿಕ ವ್ಯವಸ್ಥೆಯನ್ನು ಬಿಗಿಗೊಳಿಸುತ್ತಿದೆ. ಇಂತದೇ ವಿಶ್ಲೇಷಣಾ ವಿಧಾನವು ಉದ್ಯಮಗಳ ಕಾರ್ಮಿಕರ ಸ್ಥಿತಿಗತಿಗಳನ್ನು ಪರಿಶೀಲಿಸುವಾಗಲೂ ತಲೆ ಹಾಕುತ್ತದೆ. ಹೋರಾಟದ ದಿಕ್ಕು ತಪ್ಪಿಸಲು ಇವೆಲ್ಲ ಸಹಾಯಕವಾಗುತ್ತವೆ. ಬಂಡವಳಿಗರ ಸ್ಥಾನ ಸುಭದ್ರಗೊಳ್ಳುತ್ತದೆ. ಹಾಗಾದಾಗ ಬದಲಾವಣೆಯ ಹರಿಕಾರರು ಎಲ್ಲಿಂದ ಬರಬೇಕು? ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಲೆನಿನ್ ಅಂತಹವರ ಸೈದ್ಧಾಂತಿಕ ಗಟ್ಟಿತನ, ನಿಷ್ಕೃಷ್ಟತೆಗಳು ನಮಗೆ ದಾರಿದೀಪವಾಗುತ್ತದೆ.

ಖ್ಯಾತ ಇಂಗ್ಲಿಷ್ ನಾಟಕಕಾರ ಜಾರ್ಜ್ ಬರ್ನಾರ್ಡ್ ಷಾ ಅವರ ಮೇಲೆ ವಿಶ್ವದ ಚರಿತ್ರೆಯಲ್ಲೇ ಅತ್ಯಧಿಕವಾಗಿ ಗಣ್ಯರೆನಿಸಿಕೊಂಡ ಯುಗಪ್ರವರ್ತಕ ಕಾರ್ಲ್ ಮಾರ್ಕ್ಸ್‌ರ ಪ್ರಭಾವದ ಬಗ್ಗೆ ಬರೆಯುತ್ತಾ ಷಾ ರವರ ಚರಿತ್ರಕಾರರಾದ ಹೆಸ್ಕೆತ್ ಪಿಯರ್ಸನ್ ಹೇಳುವ ಮಾತುಗಳಿವು: "ಮಾರ್ಕ್ಸ್‌ನನ್ನು ಓದದ, ಓದಬೇಕೆಂದಿರದ, ಓದುವುದರ ಬದಲು ಸಾಯುವುದೇ ಲೇಸೆಂದು ಭಾವಿಸಿರುವ ನನಗೆ ಷಾ ಮೇಲಿನ ಮಾರ್ಕ್ಸ್ ಪ್ರಭಾವದ ಬಗೆಗೆ ಖಚಿತವಾಗಿ ಏನೂ ಹೇಳಲು ಬಾರದು; ಆದಾಗ್ಯೂ 'ದಾಸ್ ಕ್ಯಾಪಿಟಲ್' ಷಾರವರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿತೆಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಅದು ಆತನನ್ನು

ಸಮಾಜವಾದದ ಕಡೆಗೆ ಎಳೆಯಿತು. ಒಬ್ಬ ಕ್ರಾಂತಿಕಾರಿ ಬರಹಗಾರನನ್ನಾಗಿಸಿತು. ರಾಜಕೀಯ ಕಾರ್ಯರಂಗಕ್ಕೊಯ್ದಿತು. ಮನೋಭಾವವನ್ನೇ ಬದಲಿಸಿ ಆತನ ಶಕ್ತಿಗೆ ಒಂದು ಸೂಕ್ತ ಮಾರ್ಗದರ್ಶನ ನೀಡಿತು. ಕಲಾಕೃತಿಗಳ ಮೇಲೂ ಪ್ರಭಾವ ಬೀರಿ ಆತನಿಗೆ ಒಂದು ಜೀವನದ ಗುರಿಯನ್ನು ದೊರಕಿಸಿಕೊಟ್ಟು ನಿಜವಾದ ಮಾನವನನ್ನಾಗಿಸಿತು." ಮತ್ತೊಮ್ಮೆ ಪಿಯರ್ಸನ್ ಅವರು ಷಾ ಅವರನ್ನು ಕೇಳಿದ್ದರಂತೆ: "ನಿಮ್ಮ ಸಮಕಾಲೀನರಾದ ರಾಜಕೀಯ ವ್ಯಕ್ತಿಗಳಲ್ಲಿ ಯಾರನ್ನಾದರೂ ನೀವು ಮೆಚ್ಚಿರುವಿರೇನು?" ಅದಕ್ಕೆ ಷಾರವರ ಉತ್ತರ: "ಕಾರ್ಲ್ ಮಾರ್ಕ್ಸ್‌ರನ್ನು ಓದಿದವರು ಯಾರೂ ಗ್ಲಾಡ್‌ಸ್ಟನ್ ಅಂತಹವರನ್ನು ಕಂಡು ತಲೆದೂಗುವುದಿಲ್ಲ". ಎಂಬಂತಹ ಮಾತುಗಳನ್ನು ಡಾ.ಜಿ.ರಾಮಕೃಷ್ಣ ಅವರು ತಮ್ಮ 'ಮುನ್ನೋಟ'ದ ಕೃತಿಯಲ್ಲಿ ಲೆನಿನ್‌ನ ಬಗ್ಗೆ ವಿಶ್ಲೇಷಿಸುತ್ತಾರೆ.

'ಪ್ರಾವ್ದಾ'ದ 19ನೇ ಜೂನ್ 1913ರ ಸಂಚಿಕೆಯಲ್ಲಿ ಬರೆಯುತ್ತಾ ಲೆನಿನ್ ಹೇಳಿದರು "ನಮ್ಮ ಹಿಂದಿನ ಪೀಳಿಗೆಯವರು ಇದಕ್ಕಿಂತಲೂ ನಮಗಿರುವ ಕಷ್ಟಗಳು ಅಧಿಕ. ಆದರೆ ಒಂದು ದೃಷ್ಟಿಯಲ್ಲಿ ಅವರಿಗಿಂತಲೂ ನಾವು ಹೆಚ್ಚು ಅದೃಷ್ಟವಂತರು ಎಂದೇ ಹೇಳಬೇಕು. ನಾವು ಕಲಿಯವುದನ್ನು ಪ್ರಾರಂಭಿಸಿದ್ದೇವೆ. ಮತ್ತು ಕ್ರಮೇಣ ಹೋರಾಡುವುದನ್ನೂ ಕಲಿಯುತ್ತಿದ್ದೇವೆ. ಈ ಹೋರಾಟದ ಧ್ಯೇಯದ ಬಗೆಗೂ ಹಲವು ವ್ಯತ್ಯಾಸಗಳುಂಟು. ತಮ್ಮ ಹಿತವನ್ನು ಬಯಸದ ಬೇರೊಂದು ವರ್ಗದವರು ತೋರಿಸಿಕೊಟ್ಟ, ಅವರೇ ನಿರ್ದೇಶಿಸಿದ ಕೆಲವು ಮೌಲ್ಯಗಳಿಗಾಗಿ, ಕೆಲವು ಪಂಕ್ತಿಗಳನ್ನನುಸರಿಸಿ ಹೋರಾಟವನ್ನು ಹಿಂದಿನ ಪೀಳಿಗೆಯವರು ನಡೆಸಿದರು. ಆದರೆ ಇಂದಿನ ಹೋರಾಟ ನಮ್ಮದೇ ಆದ ಧ್ಯೇಯಗಳಿಗಾಗಿ ಮತ್ತು ನಮ್ಮ ವರ್ಗಕ್ಕಾಗಿ. ಮುಂದಿನ ಪೀಳಿಗೆಯವರು ನಮಗಿಂತಲೂ ಹೆಚ್ಚಿನ ಹೋರಾಟ ನಡೆಸಿ ನಮಗಿಂತಲೂ ಹೆಚ್ಚಿನ ವಿಜಯ ಸಂಪಾದಿಸುವರು" ಎಂಬ ಲೆನಿನ್ ಅವರ ಬರಹಗಳನ್ನು ಸ್ಮರಿಸಬಹುದು.

ಜೊತೆಗೆ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳನ್ನು ಹಾಕುತ್ತಾರೆ. ವೈಯಕ್ತಿಕವಾದ ಕೆಲವು ಕಾರಣಗಳಿಗಲ್ಲದೆ ಒಟ್ಟು ಸಮಾಜದ ಹಿತಕ್ಕಾಗಿ ನಾವು ಯೋಚಿಸುವುದೆಂದು? ನಾವು ಹೋರಾಟ ನಡೆಸುವುದೆಂದು? ಮತ್ತು ಅದರ ಧ್ಯೇಯಗಳೇನಾಗಿರಬೇಕು? ವರ್ಗರಹಿತ ಸಮಾಜದಲ್ಲಿ ನಮಗೆ ನಂಬಿಕೆಯಿರುವುದಾದರೆ ಅದನ್ನು ಸೃಷ್ಟಿಸುವ ಮಾರ್ಗದಲ್ಲಿ ನಾವು ನಡೆಯಲಾರಂಭಿಸಿದ್ದೇವೆಯೇ? ಶೋಷಣೆಯು ಒಂದು ಅನೀತಿ, ದುಷ್ಕೃತ್ಯ, ನೀಚ ಸ್ವಭಾವದ ಹೆಗ್ಗುರುತು, ಅಮಾನವೀಯತೆಯ ಕುರುಹು ಎಂಬುದನ್ನು ಮನಗಾಣಲು ಇನ್ನೂ ಎಷ್ಟು ಕಾಲ ಬೇಕು? ನ್ಯಾಯಪರವಾದ ದೃಷ್ಟಿ ನಮ್ಮಲ್ಲಿ ಇನ್ನೂ ಬೇರೂರದಿರಲು ಕಾರಣಗಳೇನು? ಅವುಗಳ ನಿರ್ಮೂಲನವೆಂತು? ಈ ಪ್ರಶ್ನೆಗಳನ್ನು ಕುರಿತು ನಮ್ಮ ಯುವಜನರು ಚರ್ಚಿಸಿದ್ದಾರೆಯೇ? ನಿಷ್ಕಪಟವಾಗಿಯೂ ಕೂಲಂಕಷವಾಗಿಯೂ ಅದನ್ನು ಚರ್ಚಿಸಲು ಅವರಿಗೆ ಅವಕಾಶ ಕೊಡಲಾಗಿದೆಯೆ? ಪ್ರಸ್ತುತ ಸಂದರ್ಭಗಳಲ್ಲಿ. ಲೆನಿನ್ ತತ್ತ್ವಗಳಲ್ಲಿ ಶ್ರದ್ಧೆಯಿಲ್ಲದವರು ಹೇಗೆ ಲೆನಿನ್ ಕೀರ್ತಿ, ಕಾರ್ಯ, ಚಳುವಳಿಗೆ ಅಪಚಾರವುಂಟಾಗುವುದಿಲ್ಲವೋ ಅಂತೆಯೇ ಲೆನಿನ್ ತತ್ತ್ವಗಳಲ್ಲಿ ನಂಬಿಕೆಯಿಲ್ಲದೆ ಅವುಗಳಿಗಾಗಿ ಹೋರಾಟ ನಡೆಸಲು ಸಿದ್ಧವಿಲ್ಲದವರ ಹೊಗಳಿಕೆಗಳಿಂದ ಲೆನಿನ್ ದೊಡ್ಡದಾಗಿ ಕಾಣುವುದು ಅಶಕ್ಯ. ಲೆನಿನ್ನರ ಕೀರ್ತಿ ಇರುವುದು ಅವರು ಕಟ್ಟಿದ ಸಂಸ್ಥೆಯಲ್ಲಿ ಅವರು ಯಾವ ತತ್ತ್ವಗಳಿಗಾಗಿ ಜೀವನಾದ್ಯಂತ ಹೋರಾಡಿದರೋ ಆ ತತ್ತ್ವಗಳಲ್ಲಿ. ಮಾರ್ಕ್ಸ್ ಸೂಚಿಸಿದ್ದ ಸೂತ್ರಗಳ ಆಧಾರದ ಮೇಲೆ ಕಟ್ಟಿದ ಸಮಾಜದಲ್ಲಿ ಮತ್ತು ನಿಜವಾದ ಸ್ವಾತಂತ್ರ್ಯವನ್ನು ಪ್ರತಿಯೊಬ್ಬ ಪ್ರಜೆಯೂ ಅನುಭವಿಸುವಂತೆ ಮಾಡಿದ ಅವರ ಪ್ರಜಾತಂತ್ರದಲ್ಲಿಯಾಗಿದೆ.

ಲೆನಿನ್‌ರ ದೂರದೃಷ್ಟಿ, ಹಕ್ಕು ಬಾಧ್ಯತೆಗಳ ಅರಿವು, ಸಾಮಾಜಿಕ ಯೋಜನೆಗಳ ನಿರೂಪಣೆ, ರಾಜಕೀಯವಾಗಿ ಎಲ್ಲಾ ಪ್ರಜೆಗಳನ್ನೂ ಕಾರ್ಯಬದ್ಧರನ್ನಾಗಿಸುವುದು, ಆರ್ಥಿಕ ಮುಗ್ಗಟ್ಟನ್ನು ಎದುರಿಸುವಾಗ ಪಾಲಿಸಬೇಕಾದ ರೀತಿ, ನೀತಿ, ಶಿಕ್ಷಣ ಕ್ಷೇತ್ರದಲ್ಲಿ ಅನುಸರಿಸಬೇಕಾದ ನಿಯಮಗಳು ಇತ್ಯಾದಿಗಳೆಲ್ಲ ಲೆನಿನರ ಕೃತಿಗಳಲ್ಲಿ, ಮೇಲಾಗಿ ಅವರು ನಿರ್ವಹಿಸಿದ ಕಾರ್ಯಗಳಲ್ಲಿ ಎದ್ದುಕಾಣುತ್ತೇವೆ. 1917ರ ಏಪ್ರಿಲ್, ಮೇ ತಿಂಗಳುಗಳಲ್ಲಿ ಅವರು ಪ್ರಚಾರಪಡಿಸಿದ ಕಾರ್ಯಕ್ರಮ ವಿಮರ್ಶಿತ ಪಟ್ಟಿಯನ್ನು ನೋಡಿದರೆ ಲೆನಿನ್ ಯೋಜನೆಗಳ ಪರಿಚಯ ನಮಗೆ ದೊರೆಯುತ್ತದೆ.

ಮಾರ್ಕ್ಸ್‌ವಾದವನ್ನು ಪ್ರಚಾರ ಮಾಡಲು 1900ರಲ್ಲಿ ಲೆನಿನ್ ಅವರು ಆಗ ಪ್ರಚಲಿತವಾಗಿದ್ದ ಕಾನೂನಿನ ಅವರು ವಿರುದ್ಧ 'ಇಸ್ಕ್ರಾ' ಎಂಬ ಪತ್ರಿಕೆಯನ್ನು ಪ್ರಕಾಶಿಸಲು ಆರಂಭಿಸಿದರು. ಮ್ಯಾಕ್ಸಿಂ ಗಾರ್ಕಿಯವರನ್ನು ನಿಜ್ನಿ–ನೊವ್ಗೊರೋದ್ ನಿಂದ ತ್ಸಾರ್ ಸರಕಾರವು ಉಚ್ಚಾಟಿಸಿದುದರ ವಿರುದ್ಧ ನವೆಂಬರ್ 7, 1901ರಂದು ಆ ಪಟ್ಟಣದಲ್ಲಿ ನಡೆದ ಸಭೆಯ ಬಗ್ಗೆ

ಪ್ರಸ್ತಾಪಿಸುತ್ತಾ 'ಇಸ್ಕ್ರಾ'ದ ಡಿಸೆಂಬರ್ 20, 1901ರ ಸಂಚಿಕೆಯಲ್ಲಿ ಲೆನಿನ್ ಬರೆದ ಮಾತುಗಳಿವು: "ಉತ್ತಮವಾದ ಜೀವನಕ್ಕೆ ತಮಗಿರುವ ಹಕ್ಕುಗಳನ್ನು ಒತ್ತಾಯಪೂರ್ವಕವಾಗಿ ಕೇಳಿದಾಗ ಕೆಲಸಗಾರರ ಮೇಲೆ ಕೈ ಮಾಡಲಾಗಿದೆ. ಜನಗಳನ್ನು ಮರ್ದಿಸುವ ನಿಷ್ಠುರ ಶಾಸನದ ವಿರುದ್ಧ ವಿದ್ಯಾರ್ಥಿಗಳು ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಕ್ಕಾಗಿ ಅವರ ಮೇಲೆ ಹಲ್ಲೆ ನಡೆಸಲಾಗಿದೆ. ಇವುಗಳಿಂದ ಕೂಡಿದ ಪ್ರತಿಯೊಂದು ವಾಣಿಯನ್ನೂ ಧ್ವಂಸ ಮಾಡಲಾಗುತ್ತಿದೆ. ಕೆಲಸಗಾರರು ಭಾಗವಹಿಸಿದ್ದ ಪ್ರತಿಭಟನಾ ಸಭೆಯೊಂದು ವಿದ್ಯಾರ್ಥಿಯೊಬ್ಬನ ಈ ಕೂಗುಗಳಿಂದ ಮುಕ್ತಾಯಗೊಂಡಿತು ನಿರಂಕುಶ ಪ್ರಭುತ್ವ ಪತನವಾಗುತ್ತದೆ. ಜನರು ಜಾಗೃತರಾಗಿ ಎದ್ದು ಶಕ್ತಿಯುತರೂ, ಸ್ವಾತಂತ್ರ್ಯಯುತರೂ ಆಗಿ ಮುಂದೆ ಬರುತ್ತಾರೆ." ಮುಂದುವರೆದು ಖಾರ್ಕೋವ್‌ನಲ್ಲಿ ವಿದ್ಯಾರ್ಥಿಗಳು ಪ್ರತಿಭಟಿಸಿದ ರೀತಿಯನ್ನು ಕುರಿತು ಹೇಳುತ್ತಾ ಲೆನಿನ್ ಬರೆಯುತ್ತಾರೆ: ಅಲ್ಲಿಯ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳಲ್ಲದ ಅನೇಕರು ಭಾಗವಹಿಸಿ ಕೊನೆಗೆ ಬೀದಿ ಬೀದಿಯಲ್ಲೂ ದ್ವಂದ್ವ ಸಮರವನ್ನೆಸಗಿದರು.

ಸಾಮಾನ್ಯ ಜನರ, ಅದರಲ್ಲೂ ಕೆಲಸಗಾರರ, ಬೆಂಬಲವಿಲ್ಲದೆ ಯಾವುದನ್ನೂ ಜಯಿಸಲು ಸಾಧ್ಯವಿಲ್ಲವೆಂದರಿತ ವಿದ್ಯಾರ್ಥಿಗಳು ವಿದ್ಯಾಲಯಗಳಿಗೆ ಸಂಬಂಧಿಸಿದ ತಮ್ಮ ಕೆಲವು ಸ್ವಾತಂತ್ರ್ಯಗಳ ಬೇಡಿಕೆಗಳಿಗಾಗಿ ಮಾತ್ರ ಹೋರಾಡಿದಲ್ಲಿ ನಿಷ್ಫಲವಾಗುವುದೆಂದರಿತು ಜನಸಾಮಾನ್ಯರೆಲ್ಲರ ಸ್ವಾತಂತ್ರ್ಯಕ್ಕಾಗಿ, ಸಾಮಾನ್ಯ ಜನತೆಯ ರಾಜಕೀಯ ಸ್ವಾತಂತ್ರ್ಯಕ್ಕಾಗಿ, ಹೋರಾಡಲು ಪಣತೊಟ್ಟಿದ್ದಾರೆ. ಇದೇ ಸಮಯದಲ್ಲಿ ಕೆಲಸಗಾರರನ್ನುದ್ದೇಶಿಸಿ, ಲೆನಿನ್ ಹೇಳುತ್ತಾರೆ: "ಕೆಲಸಗಾರರೇ! ರಷ್ಯಾದ ಜನತೆಯನ್ನು ಹಿಂಸಿಸುತ್ತಿರುವ ದುಷ್ಟಶಕ್ತಿಯ ಬಗ್ಗೆ ತಮಗೆಲ್ಲಾ ಪೂರ್ಣವಾಗಿ ಅರಿವುಂಟಾಗಿದೆ. ಈ ದುಷ್ಟಶಕ್ತಿಯು ನಿಮ್ಮನ್ನೆಲ್ಲಾ ಪೂರ್ಣವಾಗಿ ಬಂಧಿಸಿ ಉತ್ತಮವಾದ ಜೀವನವನ್ನು ದೊರಕಿಸಿಕೊಳ್ಳಲು ಮತ್ತು ಮಾನವೀಯ ಪ್ರತಿಷ್ಠೆಯನ್ನು ಸಾಧಿಸಿಕೊಳ್ಳಲು ಅಡ್ಡಿಯನ್ನುಂಟುಮಾಡಿದೆ. ನಿಮಗಾಗಿ ಹೋರಾಡುವ ನಿಮ್ಮ ಬಂಧುಗಳನ್ನು ದುಷ್ಟರೆಂದು ಪರಿಗಣಿಸಲಾಗುತ್ತಿದೆ. ಅದೇ ದುಷ್ಟಶಕ್ತಿಯು ಇಂದು ವಿದ್ಯಾರ್ಥಿಗಳನ್ನು ದಮನ ಮಾಡುತ್ತಿದೆ. ವಿದ್ಯಾರ್ಥಿಗಳ ಶಕ್ತಿಯನ್ನು ನಾಶಮಾಡಿದ ನಂತರ ನಿಮ್ಮ ಶಕ್ತಿಯನ್ನು ಕುಗ್ಗಿಸಲು ಯತ್ನ ನಡೆಯುವುದು ಖಂಡಿತ. ಎಲ್ಲಾ ಕ್ಷೇತ್ರಗಳಲ್ಲೂ ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಡಲು ನೀವು ಸದಾ ಸಿದ್ಧರಿರಬೇಕು. ವಿದ್ಯಾರ್ಥಿಗಳಿಗೆ ಬೆಂಬಲ ನೀಡಬೇಕಾದುದು ನಿಮ್ಮ ಕರ್ತವ್ಯ." ಹೀಗೆ ಲೆನಿನ್‌ರವರು ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಟದ ಮಾತುಗಳನ್ನು ಸೈದ್ಧಾಂತಿಕವಾಗಿ ಅರ್ಥೈಯಿಸಿಕೊಳ್ಳಬೇಕಾಗಿದೆ.

ಈ ಶತಮಾನದ ಆದಿಭಾಗದಲ್ಲಿ ರಷ್ಯಾದಲ್ಲಿದ್ದ ಉಲ್ಬಣಸ್ಥಿತಿ ಇಂದು ನಮ್ಮ ದೇಶದಲ್ಲಿ ಇಲ್ಲದಿರಬಹುದು. ಆದಾಗ್ಯೂ ಇಂದಿನ ವಿದ್ಯಾರ್ಥಿಗಳೇ ನಾಳೆಯ ಕೆಲಸಗಾರರು ಎಂಬುದರ ಅರಿವು ನಮ್ಮಲ್ಲಿ ಸಾಕಷ್ಟು ಕಂಡುಬರುತ್ತಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿನ ವಿದ್ಯಾರ್ಥಿಗಳು ತಮ್ಮದೇ ಆದ ಲೋಕದಲ್ಲಿ ವಿಹರಿಸಿಕೊಂಡಿದ್ದಾರೆಂದು ತೋರುತ್ತಿದೆ. ನಮ್ಮ ಸುತ್ತಣ ಸಮಾಜದಲ್ಲಿನ ಕುಂದುಕೊರತೆಗಳ ಬಗೆಗೆ ಒಂದು ಅನಿರ್ವಚನೀಯವಾದ ನಿರಪೇಕ್ಷೆ ಅವರಲ್ಲಿ ಕಂಡುಬರುತ್ತಿದೆ. ರಾಜಕೀಯ ರಂಗದಲ್ಲಿ ಅವರು ಆಸಕ್ತಿವಹಿಸಿ ವಿದ್ಯಾರ್ಜನೆಯನ್ನು ಕಡೆಗಾಣಬೇಕೆಂದು ಇದರ ಸೂಚ್ಯಾರ್ಥವಲ್ಲ. ಸಮಾಜದ ಆಗುಹೋಗುಗಳತ್ತ ತಮ್ಮ ಗಮನವನ್ನು ವಿಶೇಷತಃ ಕೊಟ್ಟು ವಿದ್ಯಾರ್ಥಿ ದೆಸೆಯಲ್ಲೇ ಒಂದು ಸೂಕ್ತ ಮನೋಭಾವನ್ನು ರೂಪಿಸಿಕೊಳ್ಳಬೇಕೆಂದು ಇದರ ಸಾರಾಂಶವಾಗಿದೆ. ಕೆಲಸಗಾರರೆಂದರೆ ಒಂದು ತುಚ್ಛವಾದ ವರ್ಗ, ಅಜ್ಞಾನಿಗಳ ಗುಂಪು, ಮುಂಬರಲು ಯೋಗ್ಯರಲ್ಲದ ಜನ, ಸಂಸ್ಕೃತಿ ಬಾಹಿರವಾದ ಒಂದು ಸಂಘ, ನಾಗರೀಕತೆಯನ್ನೇ ಅರಿಯದ ಒಂದು ಸಮುದಾಯ ಇತ್ಯಾದಿಯ ಕಲ್ಪನೆ ಅಸಂಗತವಾದದ್ದೆಂದು ವಿದ್ಯಾರ್ಥಿಗಳು ಮನಗಾಣಬೇಕು. ಕೆಲಸಗಾರರ ಏಳಿಗೆಯೇ ದೇಶದ ಏಳಿಗೆ, ವಿದ್ಯಾರ್ಥಿಗಳ ಹಿತ ಎಂಬುದನ್ನರಿಯಬೇಕು. ಸಮಾಜಸ್ಥಿತಿಯ ಬಗ್ಗೆ ಅರಿವು ಉಂಟಾಗದಿದ್ದರೆ ವಿದ್ಯಾರ್ಥಿಯು ಗಳಿಸುವ ಬೇರೆಲ್ಲ ವಿದ್ಯೆಯೂ ವ್ಯರ್ಥ, ಅವನ ಜ್ಞಾನ ಅಜ್ಞಾನಕ್ಕಿಂತಲೂ ಕೀಳು. ಇತ್ತೀಚಿನ ದಿನಗಳಲ್ಲಿ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಕೇಳಿಬರುತ್ತಿರುವ ಕೂಗೊಂದಿದೆ. "ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಕೆಲಸಗಾರರು ಒಂದೇ ಮತ್ತು ಅವರೆಲ್ಲಾ ಸಮಾನರು", ಎಂಬುದು ಆಕೂಗು, ಇಂದಿನ ವಿದ್ಯಾರ್ಥಿಗಣ ಇದನ್ನು ತಿಳಿದು, ಅದರಂತೆ ನಡೆಯುವುದರಲ್ಲಿದೆ ನಮ್ಮ ದೇಶದ ಹಿತ ಮತ್ತು ಅಭಿವೃದ್ಧಿ. ಈ ಮನೋಭಾವವು ಬೆಳೆದರೆ ಮಾತ್ರ ದೇಶದ ಉಜ್ವಲ ಭವಿಷ್ಯ ನಿಜವಾದ ರೂಪು ತಳೆಯಲು ಸಾಧ್ಯವಾಗುತ್ತದೆ.

ಲೆನಿನ್ ವಾಣಿ ಪ್ರಪಂಚದ ನಾನಾ ಭಾಗಗಳಲ್ಲಿ ಈಗಾಗಲೇ ಪ್ರಚಾರದಲ್ಲಿದ್ದು ಸಮಾಜವಾದವು ಸ್ಥಿರವಾಗಿ ನೆಲೆಸಲು ಪ್ರೇರಕವಾಗಿದೆ. ಸಮಾಜವಾದದಿಂದ ನೆಲೆಗೊಳಿಸಲ್ಪಡುವ ಶಕ್ತಿಯುತ ಸುಭದ್ರ ಸಮಾಜ ಕೇವಲ ಕನಸಲ್ಲವೆಂದು ಈಗ

ಸ್ಪಷ್ಟವಾಗಿದೆ. ಸಮಾಜವಾದದಿಂದಲ್ಲದೆ ವಿಶ್ವಶಾಂತಿ ಅಸಾಧ್ಯ. ಈ ತತ್ವವನ್ನು ಮುಂದುವರೆಸಿಕೊಂಡು ಮಾನವ ಜನಾಂಗಕ್ಕೆ ಸೇರಲು ಯೋಗ್ಯರೆನಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ; ವಿಶೇಷತಃ ಯುವಕರ ಜವಾಬ್ದಾರಿಯಾಗಿದೆ. ಲೆನಿನ್‌ನ ವಾಣಿಯ ಅರ್ಥ ಮತ್ತು ಕರೆ ಇದರಲ್ಲಿದೆ. 1ನೇ ಮೇ 1919ರಂದು ಮಾಸ್ಕೋವಿನ ಕೆಂಪುಚೌಕದಲ್ಲಿ ಭವಿಷ್ಯದತ್ತ ಕೈ ತೋರಿಸಿ ಲೆನಿನ್ ಕೆಲವು ಮಾತುಗಳನ್ನಾಡಿದರು. 'ಇಜ್ವೆಸ್ತಿಯಾ'ದ 2ನೇ ಮೇ 1919ರ ಸಂಚಿಕೆಯಲ್ಲಿ ಅದರ ಸಾರಂಶ ಪ್ರಕಟವಾಯಿತೆಂದು, ಆ ಮಾತುಗಳನ್ನು ಸ್ಮರಿಸೋಣ ಮತ್ತು ಅದಕ್ಕಾಗಿ ದುಡಿಯೋಣವೆಂದ "ಬಂಡವಶಾಹಿ ಕಾಲದ ಕೆಲವು ಪತ್ರಗಳನ್ನು ಅವಶೇಷಗಳನ್ನೂ ನಮ್ಮ ಮೊಮ್ಮಕ್ಕಳು ವಿಸ್ಮಯದಿಂದ ಪರೀಕ್ಷಿಸುತ್ತಾರೆ. ಜನತೆಯು ಪ್ರಾಥಮಿಕವಾಗಿ ಅಪೇಕ್ಷಿಸುವ ವಸ್ತುಗಳನ್ನು ಕೆಲವೇ ಜನರು ತಮ್ಮ ನಿಯಂತ್ರಣಗಳಿಗೆ ಒಳಪಡಿಸುತ್ತಿದ್ದರೆಂದು ನಂಬಲು ಅವರಿಗೆ ಕಷ್ಟವಾಗಬಹುದು. ಅಂತೆಯೇ ಕೈಗಾರಿಕೋದ್ಯಮಗಳು ಕೆಲವೊಬ್ಬರ ಆಸ್ತಿಯಾಗಿರುತ್ತಿತ್ತು ಎಂದು ಭಾವಿಸಲು ಶಕ್ಯವಾಗಲಾರದು; ಕೆಲ ಜನರು ಸೇರಿ ಜನತೆಯನ್ನು ಶೋಷಿಸುತ್ತಿದ್ದರೆಂಬುದನ್ನು ಚಿತ್ರಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಾರದು; ಕೆಲಸವನ್ನೇ ಮಾಡದೆ ಕೆಲವರು ಸುಖಜೀವನವನ್ನು ನಡೆಸುತ್ತಿದ್ದರೆಂದು ತಿಳಿದು ಅವರು ನಾಚಬಹುದು. ನಮ್ಮ ಮುಂದಿನ ಪೀಳಿಗೆಯವರು ಭವಿಷ್ಯದಲ್ಲಿ ಕಾಣಬಹುದಾದ ಸಮಾಜದ ಸ್ಥಿತಿ ಇಲ್ಲಿಯವರೆಗೆ ಒಂದು ಮಾಯಾಲೋಕದ ಕಥೆಯಂತೆ ಕಂಡುಬರುತ್ತಿತ್ತು. ಆದರೆ ಬಂಧುಗಳೇ, ಇಂದು ನೀವೇ ಆ ಸಮಾಜದ ಶಂಕುಸ್ಥಾಪನೆಯನ್ನು ಮಾಡಿ ಮನಸಾರೆ ಆನಂದಿಸಿದ್ದೀರಿ. ಆ ವರ್ಗರಹಿತ ಸಮಾಜವು ಕನಸಿನ ಸಾಮ್ರಾಜ್ಯವಲ್ಲವೆಂದು ತೋರಿಸಿದ್ದೀರಿ. ಈ ಸೌಧವನ್ನು ನಮ್ಮ ಮಕ್ಕಳು ಇನ್ನೂ ಹೆಚ್ಚಿನ ಆಸ್ಥೆಯಿಂದ ಕಟ್ಟುತ್ತಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ".

ವಿ.ಮಯಕೋವ್‌ಸ್ಕಿ ಹೇಳುವಂತೆ "ಲೆನಿನ್ನಿನಷ್ಟು ಜೀವಂತವಾಗಿರುವವರು ಜಗದೊಳಗಿನ್ನಾರು! ಅವನೇ ನಮ್ಮ ಶಕ್ತಿ, ನಮ್ಮ ಧೀಮಂತಿಕೆ, ನಮ್ಮ ಆಯುಧಗಳಲ್ಲಿ ಅತಿ ಫಲಕಾರಿ". ರಷ್ಯಾದ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಳವಾದ ಅಧ್ಯಯನದಲ್ಲಿ ತೊಡಗಿದ್ದರು. ಕೃಷಿ ಕ್ಷೇತ್ರದ ನ್ಯೂನತೆಗಳನ್ನು ಗುರುತಿಸಿ ಅವುಗಳಿಗೆ ಸಮಗ್ರವಾದ ಪರಿಹಾರವನ್ನು ದೊರಕಿಸಿಕೊಡುವುದು ಲೆನಿನ್‌ರವರ ಉದ್ದೇಶವಾಗಿದೆ. ರೈತಾಪಿ ಜನರ ಮಿಥ್ಯೆ ತಕ್ಕಮಟ್ಟಿನ ಪ್ರಭಾವವನ್ನು ಹೊಂದಿದ್ದ "ಸಮಾಜವಾದಿ ಕ್ರಾಂತಿಕಾರಿ" ಪಕ್ಷವೆಂದು ಕರೆದುಕೊಸ್ಳುತ್ತಿದ್ದ ಪಕ್ಷದ ಅನೇಕ ನಿಲುವುಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ವೀಕ್ಷಿಸಿ ಅವುಗಳು ಹೇಗೆ ಅಪಾಯಕಾರಿ ಸಿದ್ಧಾಂತಗಳಾಗಿದ್ದುವೆಂಬುದನ್ನು ಎತ್ತಿ ತೋರಿಸುವಂತಹ ಅನೇಕ ಲೇಖನಗಳನ್ನು ಲೆನಿನ್ 1902-03ರ ವರ್ಷಗಳಲ್ಲಿ ಬರೆದು ಪ್ರಕಾಶಿಸಿದ್ದರು. ರಷ್ಯಾದಲ್ಲಿ ಬಂಡವಾಳಶಾಹಿಯ ಬೆಳವಣಿಗೆ" ಎಂಬ ಗ್ರಂಥವನ್ನು 1899ರಲ್ಲೇ ಪ್ರಕಟಿಸಿದ್ದ ಲೆನಿನ್ 1903ರಲ್ಲಿ "ಹಳ್ಳಿಯ ಬಡವರಿಗೆ ಎಂಬ ಕಿರುಹೊತ್ತಿಗೆಯಲ್ಲಿ ರಷ್ಯದಲ್ಲಿದ್ದ ವರ್ಗಗಳ ವಿಭಜನೆಯ ಸ್ವರೂಪವನ್ನು ಜನಸಾಮಾನ್ಯರಿಗೆ ಮನೋಜ್ಞವಾದ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತಾರೆಂದು. ಕ್ರಾಂತಿಕಾರಿ ಚಳುವಳಿಯನ್ನು ಕ್ರಮೇಣ ಉನ್ನತ ಹಂತಗಳಿಗೆ ಕೊಂಡೊಯ್ಯಬೇಕಾದರೆ ವರ್ಗಭೇದವನ್ನು ಕೂಲಂಕಷವಾಗಿ ಗ್ರಹಿಸಬೇಕಾದ್ದು ಅತ್ಯವಶ್ಯಕವಾಗಿದೆ.